ರಾಜ್ಯ ಸರ್ಕಾರಿ ನೌಕರರಿಗೆ ತುಟ್ಟಿ ಭತ್ಯೆಯನ್ನು ಮಂಜೂರ್ಮಾಡುವ ಬಗ್ಗೆ

2214 - ಶ್ರೀ ಹೆಚ್.ಎಸ್. ಶಂಕರಲಿಂಗೆಗೌಡ (ಚಾಮರಾಜ) : ಮಾನ್ಯ ಹಣಕಾಸು ಮತ್ತು ಯೋಜನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕರ್ನಾಟಕ ರಾಜ್ಯ ಸರ್ಕಾರಿ ನೌಕರರಿಗೆ ಬರಬೇಕಾದ ತುಟ್ಟಿ ಭತ್ಯೆಯನ್ನು ಕೊಡಲು ಸರ್ಕಾರ ಕ್ರಮ ಕೈಗೊಂಡಿದೆಯೇ?*

ಆ) *ಹಾಗಿದ್ದಲ್ಲಿ, ಇದುವರೆವಿಗೂ ಕೊಡದಿರಲು ಕಾರಣಗಳೇನು?*

ಇ) *ಕೇಂದ್ರ ಸರ್ಕಾರಿ ನೌಕರರಿಗೂ ಮತ್ತು ರಾಜ್ಯ ಸರ್ಕಾರಿ ನೌಕರರಿಗೂ ತುಟ್ಟಿಭತ್ಯೆ ವ್ಯತ್ಯಾಸ ಇದೆಯೇ?*

ಈ) *ವ್ಯತ್ಯಾಸ ಇದ್ದಲ್ಲಿ ಎಷ್ಟು? ಕೇಂದ್ರ ಸರ್ಕಾರದ ತುಟ್ಟಿ ಭತ್ಯೆಗೆ ಸಮನಾಗಿ ಕೊಡಲು ಕ್ರಮ ತೆಗೆದುಕೊಳ್ಳುವುದೇ?*

ಉ) *ಕೇಂದ್ರ ಸರ್ಕಾರಿ ನೌಕರಿಗೆ ತುಟ್ಟಿ ಭತ್ಯೆ ಮಂಜೂರಾದ ಕೂಡಲೇ ರಾಜ್ಯ ಸರ್ಕಾರಿ ನೌಕರರಿಗೂ, ಕೊಡಬೇಕೆಂದು ರಾಜ್ಯ ಸರ್ಕಾರಿ ನೌಕರರಿಗೂ, ಆ ನಿಯಮವನ್ನು ಪಾಲಿಸಿಕೊಂಡು ಬರಲಾಗುತ್ತಿದೆಯೇ? ಇಲ್ಲದಿದ್ದಲ್ಲಿ ಕಾರಣವೇನು?*

ಶ್ರೀ ಸಿದ್ಧರಾಮಯ್ಯ (ಹಣಕಾಸು ಮತ್ತು ಯೋಜನಾ ಸಚಿವರು) :

ಅ) ಹೌದು.

ಆ) ಮೇಲಿನ 'ಅ' ಉತ್ತರದಿಂದಾಗಿ ಉದ್ಭವಿಸುವುದಿಲ್ಲ.

ಇ) ಇಲ್ಲ.

ಈ) ಉದ್ಭವಿಸುವುದಿಲ್ಲ.

ಉ) ಇಲ್ಲ, ತುಟ್ಟಿ ಭತ್ಯೆ ನೀಡುವಿಕೆಯ ನೀತಿಯನ್ನು ಸರ್ಕಾರ ಪಾಲಿಸಿಕೊಂಡು ಬರುತ್ತಿದೆ.

ಲೋಕೋಪಯೋಗಿ ಇಲಾಖೆಯ ವಸತಿಗೃಹಗಳಲ್ಲಿನ ನೀರಿನ ತೊಂದರೆ

2215 - ಶ್ರೀ ಬಿ. ಶಿವರಾಮು (ಗಂಡಸೀ) : ಮಾನ್ಯ ಬೆಂಗಳೂರು ನಗರಾಭಿವೃದ್ಧಿ ಮತ್ತು ವರ್ಕ್ಸ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೆಂಗಳೂರು ನಗರದ ಲಾಲಭಾಗ-ಸಿದ್ದಾಪುರದಲ್ಲಿರುವ ಲೋಕೋಪಯೋಗಿ ಇಲಾಖೆಯ ವಸತಿ ಗೃಹಗಳಿಗೆ ಬೆಂಗಳೂರು ನಗರ ಜಲಮಂಡಳಿಯವರು ಸರಿಯಾಗಿ ನೀರು ಬರದೆಯಿರುವುದರಿಂದ ನಿವಾಸಿಗಳಿಗೆ ಕುಡಿಯುವ ನೀರಿಗಾಗಿ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) ಹಾಗಿದ್ದಲ್ಲಿ, ಸದರಿ ನೀರಿನ ತೊಂದರೆಯನ್ನು ನೀಗಿಸಲು ಸರ್ಕಾರ ಕೂಡಲೇ ಕ್ರಮ ಕೈಗೊಳ್ಳುವುದೇ?

ಶ್ರೀ ಆರ್. ರೋಷನ್ ಬೇಗ್ (ಬೆಂಗಳೂರು ನಗರಾಭಿವೃದ್ಧಿ ಮತ್ತು ವರ್ಕ್ಸ್ ಸಚಿವರು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಯುಗಲಿ ಯೋಜನೆಯ ಅಚ್ಚುಕಟ್ಟು ಪ್ರದೇಶದ ಮಾರ್ಪಾಡು ಕುರಿತು.

2216 - ಶ್ರೀ ಬಿ. ಶಿವರಾಮು (ಗೆಂಡಸೀ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೂಲ ಯುಗಲಿ ಯೋಜನೆಯ ಅಚ್ಚುಕಟ್ಟು ಪ್ರದೇಶದಲ್ಲಿ ಬೇರೆ ಯಾವುದಾದರೂ ಏತನೀರಾವರಿ, ಹರಿ ನೀರಾವರಿ ಯೋಜನೆಗಳಿಂದ, ನೀರಾವರಿ ಕಲ್ಪಿಸುವ ಯೋಜನೆಗಳನ್ನು ಸರ್ಕಾರ ಮಂಜೂರು ಮಾಡಿದೆಯೇ;

ಆ) ಮಾಡಿದ್ದಲ್ಲಿ ಎಷ್ಟು ಎಕರೆ ಪ್ರದೇಶಕ್ಕೆ ಒದಗಿಸಲು ಮಂಜೂರಾತಿ ಮಾಡಿದೆ, (ಯೋಜನೆಯ ಹೆಸರು ಅಂದಾಜು ವೆಚ್ಚ ಕಾಮಗಾರಿಯ ಪ್ರಗತಿ ಏನು);

ಇ) ಮೂಲ ಯಗಳಿ ಯೋಜನೆಯು ಅಚ್ಚುಕಟ್ಟು ಪ್ರದೇಶಕ್ಕೆ ಬೇರರೆ ಯೋಜನೆಗಳಿಂದ ನೀರು ಒದಗಿಸುವುದರಿಂದ ಉಳಿಯುವ ನೀರರನ್ನು ಸರ್ಕಾರ ಬೇರೆ ಕಡೆಗೆ ಉಪಯೋಗಿಸಲು ಆಲೋಚನೆಯನನ್ನು ಮಾಡಿರುತ್ತದೆಯೇ;

ಈ) ಅದರ ಪ್ರಸ್ತಾವನೆಗಳು ಸರ್ಕಾರದಿ ಮುಂದೆ ಇದೆಯೇ ಇದ್ದರೆ ಅವುಗಳ ಪ್ರಗತಿ ಮತ್ತು ಯಾವ ಹಂತದಲ್ಲಿದೆ?

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯ ಮಂತ್ರಿಗಳು) :

ಅ) ಹೌದು.

ಆ) 24574 ಎಕರೆ ಪ್ರದೇಶಕ್ಕೆ ನೀರೊದಗಿಸಲು ಮಂಜೂರು ಮಾಡಿದೆ. ಎರಡು ಯೋಜನೆಗಳಿರುತ್ತವೆ. (1) ಅಂಜನೇಯಪುರ ಏತ ನೀರಾವರಿ ಯೋಜನೆ, ರೂ. 10.05 ಕೋಟಿಗಳು. ಕಾಮಗಾರಿಯು ಪ್ರಾರಂಭಿಕ ಹಂತದಲ್ಲಿದೆ. (2) ಕಾಮಸಮುದ್ರ ಏತನೀರಾವರಿ ಯೋಜನೆ ರೂ. 18.00 ಕೋಟಿಗಳು, ಮೊದಲನೇ ಹಾಗೂ ಎರಡನೇ ಹಂತದ ಕಾಮಗಾರಿಗಳು ಪೂರ್ಣಗೊಂಡಿದ್ದು, 3ನೇ ಹಂತದ ಕಾಮಗಾರಿಗಳು ಪ್ರಗತಿಯಲ್ಲಿವೆ.

ಇ) ಪರಿಶೀಲಿಸಲಾಗುವುದು.

ಈ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.